# ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಗೋವಿಂದರಾಜು, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಪ್ರಶ್ನೆ:** ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಸ್ತಿ ವಿಭಾಗದ ಶಾಖೆಯಲ್ಲಿ ಕಾರ್ಯನಿರ್ವಹಿಸುವಂಥ ನುರಿತ ಅಧಿಕಾರಿಗಳನ್ನು ಬಿಟ್ಟು ಬೋಧಕರಾಗಿರುವ ಸಹಾಯಕ ಪ್ರಾಧ್ಯಾಪಕರ ಕೃಷಿ ಯಂತ್ರೋಪಕರಣ ವಿಭಾಗದವರಿಗೆ ಆಸ್ತಿ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ನೀಡಿದ್ದು, ಕೃಷಿ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಶೇಕಡ 60ರಷ್ಟು ಬೋಧಕರ ಕೊರತೆ ಇದ್ದರೂ ಸಹ ಬೋಧಕರನ್ನು ಈ ಹುದ್ದೆಗೆ ನೇಮಕ ಮಾಡಿರುವುದರ ಕುರಿತು.

**ಉತ್ತರ:-**

- ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಕೃಷಿ ಕಾಲೇಜು, ವಿಸ್ತರಣಾ ಘಟಕ, ಸಂಶೋಧನಾ ಕೇಂದ್ರ, ಕಟ್ಟಡಗಳು, ಜಮೀನು, ಮೌಲಸೌಕರ್ಯ, ನೀರು, ದೂರವಾಣಿ, ವಾಹನಗಳು, ಹೊಸ ಕಟ್ಟಡಗಳ ನಿರ್ಮಾಣ, ರಿಪೇರಿ ಹಾಗೂ ಇತರೆ ಸೇವೆಗಳ ನಿರ್ವಹಣೆ, ಆಸ್ತಿ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ರಾಜ್ಯದ ನಾಲ್ಕೂ ಕೃಷಿ ವಿಶ್ವವಿದ್ಯಾಲಯದಲ್ಲಿ, ಇದರ ನಿರ್ವಹಣೆಗಾಗಿ ಆಸ್ತಿ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ಶಾಖೆಗಳಿದ್ದು, ಆಸ್ತಿ ಅಧಿಕಾರಿಯ ನೇಮಕಾತಿಯನ್ನು ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯಲ್ಲಿ ಮಂಡಿಸಿ, ಮಂಡಳಿಯ ಅನುಮೋದನೆಯ ನಂತರ ನೇಮಕಾತಿ ಮಾಡಲಾಗುವುದು.
- ಪ್ರಸ್ತುತ ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಬಿ.ಇ.(ಸಿವಿಲ್)-ಎಮ್.ಟೆಕ್(ಸಿವಿಲ್) ಮತ್ತು ಇರಿಗೇಶನ್ ಇಂಜಿನಿಯರಿಂಗ್ ನಲ್ಲಿ ಡಾಕ್ಟರೇಟ್ ಪದವಿ ಹೊಂದಿ, ಪ್ರಾಧ್ಯಾಪಕರಾಗಿರುವ(ಸಹಾಯಕ ಪ್ರಾಧ್ಯಾಪಕರಲ್ಲ) ಡಾ. ಎಮ್. ವಿ. ಮಂಜುನಾಥ ರವರನ್ನು ಆಸ್ತಿ ಅಧಿಕಾರಿಯ ಹುದ್ದೆಯ ಪ್ರಭಾರದಲ್ಲಿರಿಸಲಾಗಿದೆ.
- ಆಸ್ತಿ ವಿಭಾಗದ ಶಾಖೆಯಲ್ಲಿ ನುರಿತ ಅಧಿಕಾರಿಗಳಿದ್ದು, ಇವರುಗಳಿಗೆ ಸಹ ವಿಜಯಪುರ, ಬಾಗಲಕೋಟೆ ಮತ್ತು ಇಂಡಿ ವಿಭಾಗಗಳಲ್ಲಿ ಐ.ಸಿ.ಎ.ಆರ್ ಕಾಮಗಾರಿಗಳ ಅನುಷ್ಠಾನ, ಕೆವಿಕೆ ಕಛೇರಿಗಳ ದುರಸ್ತಿ, ಕಾಂಪೌಂಡ್ ಗೋಡೆ ನಿರ್ಮಾಣ, ಬಾಗಲಕೋಟ ಆವರಣದಲ್ಲಿ ಕಂಪೌಂಡ್ ಗೋಡೆ ನಿರ್ಮಾಣ, ಹುಕ್ಕೇರಿಯಲ್ಲಿ ಡಿಪ್ಲೋಮಾ ಕೃಷಿ ಕಾಲೇಜಿನ ಕಟ್ಟಡ, ಹನುಮನಮಟ್ಟಿ ಆವರಣದಲ್ಲಿ ಚಾಲ್ತಿಯಲ್ಲಿರುವ ಸ್ನಾತಕ ವಿದ್ಯಾರ್ಥಿ ನಿಲಯ, ಗ್ರಂಥಾಲಯ ಕಟ್ಟಡ, ಆಟದ ಮೈದಾನದ ದುರಸ್ತಿ ಕಾಮಗಾರಿಗಳ ಜವಾಬ್ದಾರಿಯನ್ನು ನೀಡಲಾಗಿದೆ.
- ಆದ್ದರಿಂದ, ವಿಶ್ವವಿದ್ಯಾಲಯದ ಕಟ್ಟಡ ನಿರ್ವಹಣೆ, ಕಾಮಗಾರಿಗಳನ್ನು ಸುಗಮವಾಗಿ ಪೂರ್ಣಗೊಳ್ಳುವ ಉದ್ದೇಶದಿಂದ ಡಾ. ಎಮ್. ವಿ. ಮಂಜುನಾಥ ರವರನ್ನು ಆಸ್ತಿ ಅಧಿಕಾರಿಯ ಹುದ್ದೆಗೆ ಅಧಿಕ ಪ್ರಭಾರದಲ್ಲಿರಿಸಲಾಗಿದೆ. ಈ ವ್ಯವಸ್ಥೆಯಿಂದ ಯಾವುದೇ ಚ್ಯುತಿ ಆಗಿಲ್ಲ.

ಪು.ತಿ.ನೋ...

- 2009ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 30ರನ್ವಯ ಕುಲಪತಿಯವರು ಅಧಿಕಾರಿಗಳ ನೇಮಕಾತಿಗಳನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸಿ 6 ತಿಂಗಳ ಅವಧಿಗೆ ತಾತ್ಕಾಲಿಕ ಕ್ರಮವನ್ನು ಮಾಡುವುದಕ್ಕೆ ಅವಕಾಶವಿದೆ.

ಸಂಖ್ಯೆ: AGRI/12/AUD/2023

(ಬಿ.ಸಿ ಪಾಟೀಲ್)
ಕೃಷಿ ಸಚಿವರು